ಕರ್ನಾಟಕ ಸರ್ಕಾರ
ಹೇಳಿಕೆ ಹಾಳೆ
(ಆರ್ ಪಿ ಸಂಖ್ಯೆ57)
ನಮೂನೆ ಸಂಖ್ಯೆ4

ಸಿ ಆರ್ ಪಿ 67

ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ ಸಿಂಧನೂರು

CC No.739/2014 CW-33 PW-28

| | | |
|---|---|---|
| ಹೆಸರು | : | ಬಾಳನಗೌಡ |
| ತಂದೆಯ/ಗಂಡನ ಹೆಸರು | : | ಶಾಂತವೀರಪ್ಪ |
| ವಯಸ್ಸು | : | 44 ವರ್ಷ |
| ಉದ್ಯೋಗ | : | ಪಿಐ |
| ವಾಸಸ್ಥಳ | : | ಜೆಸ್ಕಾಂ ರಾಯಚೂರು |

ಸಾಕ್ಷಿಗೆ ಪ್ರಮಾಣ ವಚನ ಬೋದಿಸಿದ ದಿನಾಂಕಃ 18-06-2024

ಮುಖ್ಯ ವಿಚಾರಣೆಃ ಸ.ಸ.ಅ. ರವರಿಂದ

ನಾನು ಸೆಪ್ಟೆಂಬರ್ 2013 ರಿಂದ ಮೇ 2015 ರವರೆಗೆ ಸಿಂಧನೂರಿನ ವೃತ್ತ ನಿರೀಕ್ಷಕ ಎಂದು ಕರ್ತವ್ಯ ನಿರ್ವಹಿಸಿದ್ದೇನೆ.

ದಿಃ 02-09-2013 ರಂದು ಈ ಪ್ರಕರಣದ ಮುಂದಿನ ತನಿಖೆಯನ್ನು ಚಾಸಾ-32 ರವರಿಂದ ಪಡೆದುಕೊಂಡೆ. ಆವರೆಗೆ ಆದ ತನಿಖೆಯನ್ನು ಪರೀಶೀಲಿಸಿದೆ. ದಿಃ 10-09-2013 ರಂದು 2 ನೇ ಆರೋಪಿ ನ್ಯಾಯಾಲಯದಿಂದ ನಿರೀಕ್ಷಣಾ ಜಾಮೀನು ತೆಗೆದುಕೊಂಡು ಬಂದು ಠಾಣೆಗೆ ಹಾಜರಾಗಿದ್ದು, ಆಕೆಯನ್ನು ದಸ್ತಗೀರ ಮಾಡಿ ನಿಯಮಾವಳಿ ಪಾಲಿಸಿ ಆಕೆಯ ಸ್ವ ಖುಷಿ ಹೇಳಿಕೆ ಪಡೆದುಕೊಂಡಿರುತ್ತೇನೆ.

ದಿಃ 26-09-2013 ರಂದು ಚಾಸಾ-23 ಮತ್ತು 24 ರವರ ಹೇಳಿಕೆಗಳನ್ನು ಪಡೆದುಕೊಂಡಿರುತ್ತೇನೆ. ಅದೇದಿನ ಚಾಸಾ-1 ರವರು ಹಾಜರಪಡಿಸಿದ ದಾಖಲೆಗಳನ್ನು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ದಿಃ 19-04-2014 ರಂದು ತನಿಖೆ ಪೂರ್ಣಗೊಂಡಿದ್ದರಿಂದ ಆರೋಪಿತರ ವಿರುದ್ಧ ಸಾಕಷ್ಟು ಸಾಕ್ಷ್ಯಾದಾರಗಳು ಕಂಡುಬಂದಿದ್ದರಿಂದ ಆರೋಪಿತರ ವಿರುದ್ಧ ದೋ.ಪ. ಸಲ್ಲಿಸಿರುತ್ತೇನೆ.

2 ನೇ ಆರೋಪಿಯ ಸ್ವ ಖುಷಿ ಹೇಳಿಕೆಯನ್ನು ನಿಪಿ-69 ಎಂದು, ಸಾಕ್ಷಿಯ ಸಹಿಯನ್ನು ನಿಪಿ-69 ಎ ಎಂದು, ಆರೋಪಿಯ ಸಹಿ ನಿಪಿ-69 ಬಿ ಎಂದು ಗುರುತಿಸಲಾಯಿತು. ಸಾಕ್ಷಿಯು ನಿಪಿ-60 ನ್ನು ನೋಡಿ ಗುರುತಿಸಿರುತ್ತಾರೆ.

<u>ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದ</u>

ಚಾಸಾ-1 ರವರು ಬಂಗಾರದ ಸಾಲದ ಶಾಖೆಯ ಮೇಲ್ವಿಚಾರಕರು ಆಗಿದ್ದರು ಎಂದರೆ ಸರಿ. (ಈ ಹಂತದಲ್ಲಿ ಸಾಕ್ಷಿದಾರರು ಆಡಿಟ್ ರಿಪೋರ್ಟ್ ನ್ನು ನೋಡಿಕೊಳ್ಳಲು ಸಮಯಾವಕಾಶ ಕೋರಿದ್ದು ಪಾಟೀ ಸವಾಲನ್ನು ಮುಂದೂಡಲಾಯಿತು).

(ನನ್ನ ಉಕ್ತದ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿರುತ್ತಾರೆ)

ಓ ಹೇ ಕೇ ಸರಿ ಇದೆ.

ಪ್ರಧಾನ ಜೆ.ಎಮ್.ಎಫ್.ಸಿ., ಸಿಂಧನೂರು.